ಟ್ರೀಟ್‌ಮೆಂಟ್‌ಗೆ ಬಂದಿದ್ರು. ನಾವು ಬರೋ ತನಕ ಏನೂ ತೊಂದರೆ ಮಾಡಬೇಡಿ ಅಂದಿದ್ದೇನೆ. ನಾಳೆ ಬೆಳಗ್ಗೆ ನೋಡಿ ಜೋಪಾನವಾಗಿ ಕಾಡಿಗೆ ಬಿಡೋಣ. ನೀವೀಗಲೇ ರೈಲು ಹತ್ತಿ ರಾತ್ರೋ ರಾತ್ರಿ ಬಂದ್ಬಿಡಿ' ಎಂದರು. ನನ್ನ ಸಂಭ್ರಮಕ್ಕೆ ಪಾರವೇ ಇರಲಿಲ್ಲ. ಕ್ಯಾಮೆರಾ ತುಂಬಿಕೊಂಡು ಆ ತಕ್ಷಣವೇ ಊರು ತೊರೆದು, ತುಮಕೂರು ಸೇರಿದೆ. ರಾತ್ರಿಯೆಲ್ಲಾ ಅದರದೇ ಧ್ಯಾನ ಮತ್ತು ಜಪ.

ಮಲೆನಾಡಿನಂಥ ದಟ್ಟ ಕಾಡಿನಲ್ಲಿ ಮಾತ್ರ ಇರುತ್ತದೆ ಎಂದು ಭಾವಿಸಿದ್ದ ಸ್ಲೆಂಡರ್ ಲೋರಿಸ್ ಬಯಲು ಸೀಮೆಯಲ್ಲಿ ಪ್ರತ್ಯಕ್ಷವಾಗಿರುವುದು ಕೇಳಿ ಸೋಜಿಗವೆನಿಸಿತು. ನಾವೆಲ್ಲಾ ಬೆಳಗ್ಗೆ ಎದ್ದು ಇಟ್ಟಿಗೆ ಬಟ್ಟಿಯ ಹತ್ತಿರ ಹೋದೆವು. ಅಲ್ಲಿ ಕೆಲಸ ಮಾಡುವ ಹುಡುಗರು ಉತ್ತರ ಭಾರತದವರು. ಮರದ ಮೇಲೆ ಹತ್ತುತ್ತಿದ್ದ ಈ ಸೋಜಿಗದ ಜೀವಿಯ ರೂಪವನ್ನೂ ಅವರು ಕೂಡ ಮೊದಲ ಸಲ ಕಂಡವರು. 'ಬೆಕ್ಕಿನಂತೆ ಕಾಣುತ್ತಿತ್ತು. ಏನಿರಬಹುದೆಂದು ಕುತೂಹಲವಾಗಿ ಬೆನ್ನಿಗೆ ಕೈ ಹಾಕಿದೆ. ತಿರುಗಿ ಸರಿಯಾಗಿ ಕಚ್ಚಿ ಬಿಡ್ತು. ಗುರ್ ಅಂತ ಸದ್ದು ಮಾಡಿ ಹೆದರಿಸುತ್ತೆ ಸಾರ್. ಇದರ ಹಲ್ಲುಗಳು ಗರಗಸದಷ್ಟೇ ಚೂಪಾಗಿವೆ. ಕಣ್ಣು ನೋಡಿದ್ರೆ ಹೆದರಿಕೇನೆ ಆಗುತ್ತೆ. ಕತ್ತಲಲ್ಲಿ ನೋಡಿದ್ರೆ ಪರಪರಾಂತ ಉಚ್ಚೇನೆ ಹೋಯ್ಕೊಬೇಕಾಗುತ್ತೆ' ಎಂದು ಹಿಡಿದ ಹುಡುಗ ಹೇಳಿದ. ಅವನ ಕೈಗೆ ಬ್ಯಾಂಡೇಜ್ ಬಟ್ಟೆ ಸುತ್ತಲಾಗಿತ್ತು. ಕೋಳಿಯ ಪಂಜರದಲ್ಲಿ ಅದನ್ನು ಬಂಧಿಸಿ ಇಟ್ಟಿದ್ದರು. ಅದಕ್ಕೆ ಇವರು ಸಲ್ಲಿಸಿದ ಯಾವ ಆಹಾರವನ್ನು ಅದು ಮೂಸಿಯೂ ನೋಡಿರಲಿಲ್ಲ. ಘಮಟು ವಾಸನೆ ಬಡಿಯುತ್ತಿದ್ದ ಅದರ ಕೆಲ ಫೋಟೊ ತೆಗೆದು ಹತ್ತಿರದ ಕುರುಚಲು ಕಾಡಿಗೆ ಬಿಟ್ಟೆವು.

ಇದಾದ ಮೇಲೆ ಗೊತ್ತಾದ ವಿಷಯವೆಂದರೆ, ತುಮಕೂರು ಸುತ್ತಮುತ್ತ ಇವುಗಳ ಇರುವಿಕೆ ಸಾಮಾನ್ಯ ಎಂಬುದು ತಿಳಿಯಿತು. ನನ್ನ ಅನೇಕ ಅಲ್ಲಿನ ಗೆಳೆಯರು ರಾತ್ರಿ ಹೊತ್ತು ತೋಟದ ಆಸುಪಾಸಿನಲ್ಲಿ ಇವುಗಳನ್ನು ನೋಡಿದ್ದಾಗಿ ಹೇಳಿದರು. ಕುಣಿಗಲ್, ಹುಲಿಯೂರು ದುರ್ಗ ಕಡೆ ಕೂಡ ಆಗಾಗ ಸಿಗುತ್ತವೆ ಎಂಬ ವಿಷಯವೂ ಮನದಟ್ಟಾಯಿತು. ಮಲೆನಾಡಿನಲ್ಲಿ ನಾನು ಮೊದಲಿಗೆ ನೋಡಿದ್ದ ಕಾಡುಪಾಪಕ್ಕೂ ಇದಕ್ಕೂ ಬಣ್ಣ ಮತ್ತು ಆಕಾರದಲ್ಲಿ ತುಂಬಾ ವ್ಯತ್ಯಾಸವಿತ್ತು. ಬಯಲುಸೀಮೆಯ ಪ್ರಾಣಿಗಳಿಗೂ ಮಲೆನಾಡಿನ ಪ್ರಾಣಿಗಳಿಗೂ ಹೀಗೆ ಸಣ್ಣಪುಟ್ಟ ಬದಲಾವಣೆಗಳಿರುವುದು ಅಚ್ಚರಿಯ ಸಂಗತಿಯಲ್ಲ.

ಒಮ್ಮೆ ತೀರ್ಥಹಳ್ಳಿಯ ವಿನಯ ತಕ್ಷಣವೇ ಹೊರಟು ಬರಬೇಕೆಂದು ಕೂಗಿಕೊಂಡ. ನಾನು ಹೋಗುವ ಹೊತ್ತಿಗೆ ಕಾಡುಪಾಪ ಒಣಗಿದ ಮರದ ರೆಂಬೆಗಳ ಮೇಲೆ ಕೂತಿತ್ತು. ಅಷ್ಟು ಚೆಂದದ ಕಾಡುಪಾಪ ನಾ ನೋಡಿದ್ದೇ ಇಲ್ಲ. ಇದಕ್ಕೂ ಮೊದಲು ಬಳಗಟ್ಟೆ ಸಮೀಪ ರಾತ್ರಿ ಹೊತ್ತಿನಲ್ಲಿ ಮರದ ಮೇಲೆ ಕೂತಿದ್ದ ಎರಡು ಲೋರೀಸ್‌ಗಳನ್ನು ವಿನಯ ತೋರಿಸಿದ್ದನಾದರೂ ಅವುಗಳ ಚಿತ್ರ ತೆಗೆಯಲು ಸಾಧ್ಯವಾಗಿರಲಿಲ್ಲ. ವಿನಯನ ಅತ್ತೆ ಮನೆಯ ಸಮೀಪದ ಅಡಿಕೆ ತೋಟದ ಬಳಿ ಬಂದಿದ್ದ ಅದು, ಪ್ರಾಯಶಃ ನಡು ಪ್ರಾಯದ್ದು. ನೋಡಲು ಮುದ್ದಾಗಿತ್ತು. ಹೆಚ್ಚು ಆಕ್ರಮಣ ಮಾಡದೆ ಮೌನವಾಗಿ ಪಿಳಿಪಿಳಿ ಕಣ್ಣು ಬಿಡುತ್ತಾ ಕೂತಿತ್ತು. ಅದರ ಮುಗ್ಧ ಕಣ್ಣುಗಳು ಕರುಣೆ ಹುಟ್ಟಿಸುವಷ್ಟು ಆಕರ್ಷಕವಾಗಿದ್ದವು. ಉತ್ತಮ ಚಿತ್ರಗಳು ಅಂದು ಕೈಗೆಟಕಿದವು.

ಮರವನ್ನು ನಿಧಾನಕ್ಕೆ ಸ್ಲೋ ಮೋಶನ್‌ನಲ್ಲಿ ಹತ್ತಿ ಹೋಗುವ ಕಾಡುಪಾಪದ ಚೆಂದವನ್ನು ನೋಡಿಯೇ ಅನುಭವಿಸಬೇಕು. ಅದರ ನೀಳ ಕೈಗಳು, ಉದ್ದ ಬೆರಳುಗಳು ಗಿಡಗಳ ರೆಂಬೆಕೊಂಬೆಗಳನ್ನು ಸರಾಗವಾಗಿ ಹಿಡಿದು ಹತ್ತಲು ಹೇಳಿ ಮಾಡಿಸಿದಂತಿವೆ. ಒಮ್ಮೆ ಎದ್ದು ನಿಂತು ಸುತ್ತಲೂ ಕತ್ತನ್ನು ಗಿರಗಿಟ್ಲೆಯಂತೆ ತಿರುಗಿಸಿ ನೋಡಬಲ್ಲದು. ಮೆತ್ತನೆಯ ಸ್ಪಂಜಿನಂತಹ ಅದರ ಕೋಮಲ ದೇಹ ಕೆಲವೊಮ್ಮೆ ರಬ್ಬರಿನಂತೆ ಹಿಗ್ಗುತ್ತದೆ. ಇಡೀ ಇದರ ಅಂದಚೆಂದ ಅಡಗಿರುವುದೇ ಜೀವಂತ ಕಣ್ಣುಗಳಲ್ಲಿ. ವಜ್ರದಂತೆ ಹೊಳೆಯುವ ಅದರ ನಯನಗಳು ವಜ್ರದ ಹೊಳಪನ್ನು ನಾಚಿಸುವಂತವು.

ಇಂಥದ್ದೊಂದು ಅಪರೂಪದ ಜೀವಿ ನಮ್ಮ ನಡುವಿನಿಂದ ನಿಧಾನಕ್ಕೆ ಕಣ್ಮರೆಯಾಗುತ್ತಿರುವ ವಿಷಯವೇ ಆತಂಕದ್ದು. ಯಾರಿಗೂ ಕೇಡು ಬಯಸದ ಸಾಧು ಸ್ವಭಾವದ ಕಾಡುಪಾಪ ಕಾಡಿನ ಮರ, ಪೊದೆ, ಇಲ್ಲವೇ ಕಾಡಿಗಂಟಿಕೊಂಡ ತೋಟಗಳಲ್ಲಿ